18.	ಗುಲ್ಬರ್ಗಾ	41367
19.	ಬೀದರ್	76099
20.	ರಾಯಚೂರು	35693
21.	ಬಳ್ಳಾರಿ	26690
	ಒಟ್ಟು	**1045286**

ಒಟ್ಟಾರೆಯಾಗಿ ರಾಜ್ಯದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ 1044290 ರೈತ ಸದಸ್ಯರು ಹಾಗೂ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ವತಿಯಿಂದ 996 ಸದಸ್ಯರು ಸಾಲಮನ್ನಾ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

245(561) ಶ್ರೀ ಶ್ರೀರಾಮ ರೆಡ್ಡಿ (ಬಾಗೇಪಲ್ಲಿ)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪಡಿತರ ವಿತರಣೆಯಲ್ಲಿ ಯೂನಿಟ್ ಪದ್ಧತಿ ಅಳವಡಿಸಿರುವದರಿಂದ ಬಡ ಜನತೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಯೂನಿಟ್ ಪದ್ಧತಿಯನ್ನು ಸ್ಥಗಿತಗೊಳಿಸಲು ಇಚ್ಛಿಸಿದೆಯೇ?

ಇ) ಹಾಗಿದ್ದಲ್ಲಿ ಸಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಗೋವಿಂದ ಎಂ ಕಾರ್ಜೋಳ

ಅ) ಹಲವು ಸಂಘ ಸಂಸ್ಥೆಗಳು ಈ ಕುರಿತು ಮನವಿ ಸಲ್ಲಿಸಿರುತ್ತವೆ.

ಈ ಮೊದಲು ಪ್ರತೀ ಕಾರ್ಡಿಗೆ ಇಡಿಗಂಟಾಗಿ 25 ಕೆ.ಜಿ. ಆಹಾರ ಧಾನ್ಯಗಳನ್ನು ನೀಡುವ ಪದ್ಧತಿಯಲ್ಲಿ ಒಂದು ಅಥವಾ ಎರಡು ಸದಸ್ಯರಿರುವ ಕುಟುಂಬಗಳಿಗೂ ಸಹ ಹೆಚ್ಚುವರಿ ಸದಸ್ಯರಿರುವ ಕುಟುಂಬಗಳಿಗೂ ಸಹ ಸಹಾಯಧನಯುಕ್ತ ಆಹಾರ ಧಾನ್ಯಗಳನ್ನು ನೀಡಲಾಗುತ್ತಿತ್ತು. ಇದರಿಂದಾಗಿ ಸದಸ್ಯ ಸಂಖ್ಯೆಯ ಆಧಾರದ ಮೇಲೆ ಆಹಾರ ಧಾನ್ಯ ವಿತರಿಸುವ ಯೂನಿಟ್ ಪದ್ಧತಿಯನ್ನು ಆರಂಬಿಸಲಾಗಿರುತ್ತದೆ.

ಆ) ಇಲ್ಲ. ಯೂನಿಟ್ ಪದದ ಅಳವಡಿಕೆಯಿಂದಾಗಿ ಸಹಾಯದನ ಯುಕ್ತ ಆಹಾರ ಧಾನ್ಯಗಳನ್ನು ಸದಸ್ಯರ ಸಂಖ್ಯೆಯಾದಾರವಾಗಿ ನೀಡಲಾಗುತ್ತಿದೆ. ಮೇಲಿನ ಕಾರಣದಿಂದಾಗಿ ಹಾಲಿ ಈ ಪದ್ಧತಿಯನ್ನು ಸ್ಥಗಿತಗೊಳಿಸುವ ಉದ್ದೇಶ ಇರುವುದಿಲ್ಲ.

ಇ) ಮೇಲಿನ ಕಾರಣಗಳಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

246(549) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಎಷ್ಟು ಇವೆ.?

ಆ) ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ಆಹಾರ ಧಾನ್ಯಗಳ ಅರ್ಹ ಫಲಾನುಭವಿಗಳಿಗೆ ಸಮಪರ್ಕವಾಗಿ ವಿತರಣೆಯಾಗದಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ?